



# ಎಲ್ಲೆಲ್ಲೂ ಹುಡುಕಿದೆ

ಮನೆಯಲ್ಲಿ ಕಾಣೆಯಾದ ವಸ್ತುಗಳನ್ನು ಹುಡುಕುವುದು ‘ಟ್ರೆಶರ್ ಹಂಟ್’ನಂತೆ. ಹುಡುಕಾಟದ ಈ ಪಡಿಪಾಟಲನ್ನು ಬಲ್ಲವರೇ ಬಲ್ಲರು.

■ ಶ್ರೀರಂಜನಿ ಅಡಿಗ

‘ಮನೆಯೇ ಮೊದಲ ಪಾಠಶಾಲೆ. ತಾಯಿಯೇ ಮೊದಲ ಗುರು’ ಎಂದು ತಾಯಿಗೆ ಗುರುವಿನ ಪಟ್ಟ ಕೊಟ್ಟವರು ನಾವು. ಕಾಲ ಬದಲಾಗುತ್ತದೆಯಷ್ಟೇ! ಗುರುವಿನೊಂದಿಗೆ ಅವಳು ನರ್ಸ್, ಮನೆ ಕೆಲಸದವಳು, ಅಡುಗೆ ಕೆಲಸದವಳು, ಮನರಂಜಕಳು, ಮಕ್ಕಳ ಸೆಕ್ಯುರಿಟಿ ಗಾರ್ಡ್ ಮಾತ್ರವಲ್ಲದೆ, ಈಗಿನ ಗೂಗಲ್ ಯುಗದಲ್ಲಿ ಕತೆ ಹೇಳು ಅಂದೊಡನೆ ಹೇಳುವ ಸಿರಿ, ಅಲೆಕ್ಸಾ! ಮನೆಮಂದಿಗೆ ನಾಳಿನ ಕೆಲಸ ನೆನಪಿಸುವ ರಿಮೈಂಡರ್. ಇವೆಲ್ಲಕ್ಕಿಂತ ಮುಖ್ಯವಾಗಿ ಮನೆಯಲ್ಲಿ ಏನೇ ಕಳೆದಿದ್ದರೂ ಕ್ಷಣಮಾತ್ರದಲ್ಲಿ ಹುಡುಕಿಕೊಡುವ ಗೂಗಲ್ ಸರ್ಚ್.

ಕೆಸುವಿನ ಬುಡಕ್ಕೆ ಕಟ್ಟಿದಂತಿರುವ ನನ್ನ ಮುಂಜಾವಿನಲ್ಲಿ ‘ಅಮ್ಮಾ, ಸಾಕ್ಸ್ ಕಾಣ್ತಾ ಇಲ್ಲ’, ‘ಟೈ ಎಲ್ಲಿದೆ?’ ಎಂಬ ಸುಪ್ರಭಾತ, ಬುತ್ತಿಗೆ ಅನ್ನದ ಬಾತ್ ತಯಾರಾಗುವಾಗ ಕೇಳಿಸುವುದು. ‘ಶೂವಿನೊಳಗೇ ಸಾಕ್ಸ್ ಇಟ್ಟರೆ ಕಳೆದುಹೋಗುವುದಾದರೂ ಹೇಗೆ?’ ಎಂದರೆ ‘ಸಾಕ್ಸಿನೊಡನೆ ಶೂವೂ ನಾಪತ್ತೆ’ ಎಂಬ ಉತ್ತರ ಇನ್ನಷ್ಟು ರೇಜಿಗೆ ಹುಟ್ಟಿಸುತ್ತದೆ. ಇರುವ ಕೆಲಸ ಸಾಲದೆಂದು ಬೆಳ್ಳಂಬೆಳ್ಳಗೆ ಹುಡುಕುವ ಎಕ್ಸ್ಟ್ರಾ ಕೆಲಸ.

‘ಇನ್ನೊಮ್ಮೆ ಸಿಗಬೇಕು ಅಂತಿದ್ದರೆ ಒಂದೇ ಜಾಗದಲ್ಲಿಡುವ ಅಭ್ಯಾಸ ಮಾಡಿಕೊಳ್ಳಿ’ ಎಂಬ ಆದೇಶ ಎಂದೂ ಜಾರಿಯಾಗದ ಕಾನೂನಿನಂತೆ ಮೂಲೆಸೇರಿದೆ. ಇನ್ನು ಯಾವುದಾದರೂ ಸಮಾರಂಭಕ್ಕೆ ಹೊರಟಾಗ ಕಿವಿಯ ಓಲೆ, ಬಳೆ, ಸರಗಳು ಸಿಗದೇ ಮಗಳು ಬೀರುವಿನಲ್ಲಿರುವುದನ್ನೆಲ್ಲಾ ಹೊರಗೆ ಹಾಕಿ ಮನೆಯೆನ್ನುವುದನ್ನು ಸಂತೆ ಮಾಡಿಬಿಟ್ಟಿರುತ್ತಾಳೆ. ಕೊನೆಗೆ ಜ್ಯುವೆಲ್ಲರಿ ಬಾಕ್ಸ್‌ನಲ್ಲಿದ್ದುದು ಹುಡುಕಿಕೊಡಲು ನಾನೇ ಫೀಲ್ಡಿಗೆ ಇಳಿಯಬೇಕು.

ನನ್ನ ಪತಿ ಆಫೀಸಿಗೆ ಹೊರಡುವಾಗ ಮರೆಯುತ್ತೇನೆಂದು ಎಚ್ಚೆತ್ತುಕೊಂಡು ಮುಂಚೆಯೇ ಗಾಡಿ ಕೀಯನ್ನು ಜೇಬಿನೊಳಕ್ಕೆ ಇಟ್ಟುಕೊಂಡಿರುತ್ತಾರೆ. ಆದರೆ ಅದನ್ನೇ ಮರೆತು, ಗಾಡಿ ಹತ್ತಿರ ಹೋದೊಡನೆ ಕೀ ತರಲಿಲ್ಲವೆಂದು ಮನೆಗೆ ಬಂದು ‘ಕೀ ನೋಡಿದ್ಯೇನೇ’ ಎಂದು ತಮ್ಮ ಹುಡುಕಾಟದ ಕಾರ್ಯಕ್ರಮಕ್ಕೆ ನನ್ನನ್ನೂ ಸೇರಿಸಿಕೊಳ್ಳುತ್ತಾರೆ. ಟೀವಿ ಟೇಬಲ್ಲು, ಡ್ರಾಯರ್ರು, ಟ್ರೇ, ಹೀಗೆ ಇರುವ ಸಾಧ್ಯತೆಗಳನ್ನೆಲ್ಲಾ ಅವಲೋಕಿಸಿ ಇನ್ನು ಸಿಗದು ಎಂದು ಮ್ಲಾನವದನರಾಗುವಷ್ಟರಲ್ಲಿ – ಅವರ ಬುದ್ಧಿ ಅರಿತಿರುವ ನಾನೇ ಕೊನೆಗೆ ‘ನಿಮ್ಮ ಕಿಸೆಯನ್ನೂ ಒಮ್ಮೆ ತಡಕಾಡಿಕೊಳ್ಳಿ ಎಂದು ಅಂಜನ ಹಾಕಿದವಳಂತೆ ಹೇಳುತ್ತೇನೆ.

ನಮ್ಮ ಮನೆಯಲ್ಲಿ ಫೋನು ಹುಡುಕುವ ಕೆಲಸ ದೊಡ್ಡ ಪ್ರಾಜೆಕ್ಟ್. ಪತಿಮಹಾಶಯರು ಆಫೀಸಿನ ಕೆಲಸದಲ್ಲಿರುವಾಗ, ತುರ್ತಿನ ಕೆಲಸಕ್ಕೆಂದು ಫೋನು ಹುಡುಕಲಾರಂಭಿಸಿದರೆ ಸಿಗಬೇಕಂತಿದೆಯೇ? ನನ್ನ ಫೋನ್‌ನಿಂದ ಕರೆ ಮಾಡುತ್ತಾರೆ. ಕುಟುಕು ಜೀವ ಹಿಡಿದುಕೊಂಡ ಫೋನು ರಿಂಗಾದ ಸದ್ದು ಕೇಳಿಸಿ, ಪುನಃ ಪುನಃ ರಿಂಗು ಕೊಡುತ್ತಾ ಶಬ್ದವೇಧಿ ವಿದ್ಯೆಯಂತೆ ರಿಂಗ್ ಟೋನ್ ಕೇಳಿಸಿದ ಕಡೆ ಸಾಗುತ್ತಾರೆ. ಕೇಳಿಸದಿದ್ದರೆ ಇನ್ನೂ ಪೇಚಾಟ. ಕೆಲವೊಮ್ಮೆ ಫೋನು ಬೆಡ್ಡಿನ ಮೇಲೆ ಸುಖ ನಿದ್ದೆಯಲ್ಲಿರುತ್ತದೆ. ಅದು ಸಿಗುವುದು ಕೂಡ ನನಗೇ! ಹೀಗಾಗಿ ಟ್ರೆಶರ್ ಹಂಟ್‌ನ ವಿನ್ನರ್ ಯಾವಾಗಲೂ ನಾನೇ!

ಮಕ್ಕಳು ಸಣ್ಣವರಿದ್ದಾಗ ಕಳೆಯುವುದು, ಮತ್ತೆ ಅದಕ್ಕಾಗಿ ಹುಡುಕುವ ಪ್ರಕ್ರಿಯೆ ನನ್ನ ತಾಳ್ಮೆ ಪರೀಕ್ಷಿಸುತ್ತಿತ್ತು. ದೊಡ್ಡದೊಡ್ಡ ಸಾಮಗ್ರಿಗಳೇ ಕೈಗೆ ಸಿಗದಿರುವಾಗ ಚಿಕ್ಕಪುಟ್ಟ ಸಾಮಗ್ರಿಗಳಾದ ರಬ್ಬರು, ಶಾರ್ಪನರ್, ಸಣ್ಣಸಣ್ಣ ಆಟಿಕೆಗಳ ಆಸೆ ಬಿಟ್ಟೇಬಿಡುತ್ತಿದ್ದೆ. ಜೋಡಿವಸ್ತುಗಳಾದ ಬಾಟಲಿಯ ಮುಚ್ಚಳ, ಚಪ್ಪಲಿಯ ಇನ್ನೊಂದು ಜೊತೆ, ಕಿವಿಯ ಇನ್ನೊಂದು ಓಲೆ ಅರ್ಜೆಂಟಿನಲ್ಲಿಯೇ ಕೈಕೊಡುತ್ತವೆ. ಅಡುಗೆಮನೆಯ ಕತ್ತರಿ, ಕನ್ನಡಕ, ಪೌಡರ್ ಡಬ್ಬಿ, ಕ್ಲಿಪ್‌ಗಳು ಬೇಕೆಂದಾಗ ಕೈಗೆ ಸಿಗದೆ, ಅದಕ್ಕಾಗಿ ಬದಲಿ ವ್ಯವಸ್ಥೆ ಮಾಡಿ ಕೆಲಸ ಪೂರೈಸಿಕೊಂಡದ್ದಿದೆ. ಅವುಗಳು ಯಾವತ್ತೋ ಇನ್ನೇನನ್ನೋ ಹುಡುಕಲು ಹೋದಾಗ ಸಿಕ್ಕಿ ಬಿಡುತ್ತಿದ್ದವು.

ನನ್ನ ಅಮ್ಮ ಕೂಡ ಯಾವುದೇ ವಸ್ತುವನ್ನು ಜಾಗರೂಕಳಾಗಿ ಇಡುವಲ್ಲಿ ಸಿದ್ಧಹಸ್ತಳು. ಸುಲಭವಾಗಿ ಸಿಗಲೆಂದು ತಲೆದಿಂಬಿನ ಅಡಿಯೋ, ಅಡುಗೆಮನೆಯ ಕಿಂಡಿಯೊಳಗೋ, ಯಾವುದಾದರೂ ಡಬ್ಬಿಯೊಳಗೋ ಇಟ್ಟಿರುತ್ತಾಳೆ. ಬಹುಪಾಲು ಸಂದರ್ಭಗಳಲ್ಲಿ ಇಟ್ಟ ಜಾಗವನ್ನು ಮರೆತು ಇಡೀ ಮನೆಯನ್ನು ಬುಡಮೇಲು ಮಾಡಿ ಹುಡುಕಲಾರಂಭಿಸುತ್ತಾಳೆ. ಅದಕ್ಕೆ ನಮ್ಮ ತಂದೆ ‘ಅವಳು ಕಾಗೆ ತರಹ. ಕಳೆಯಬಾರದೆಂದು ಬಚ್ಚಿಡುವುದು, ಕೊನೆಗೆ ಅವಳಿಗೇ ಸಿಗದೆ ಎಲ್ಲಾ ಕಡೆ ಹುಡುಕುತ್ತಾಳೆ’ ಎಂದು ತಮಾಷೆ ಮಾಡುತ್ತಿದ್ದರು. ಕಳೆದು ಹೋದ ವಸ್ತುಗಳು ಸಿಕ್ಕಲಿ ಎಂದು ಕೋಟದ ಅಮೃತೇಶ್ವರಿಗೋ, ಸಾಲಿಗ್ರಾಮದ ಗುರುನರಸಿಂಹನಿಗೋ ಐದು ರೂಪಾಯಿಯ ಹರಕೆ ಹೊತ್ತುಕೊಳ್ಳುವುದು ಇದ್ದೇ ಇತ್ತು.

ನನ್ನ ಪಿಯುಸಿ ಆಟೊಗ್ರಾಫ್ ಪುಸ್ತಕದಲ್ಲಿ ಅಧ್ಯಾಪಕರೊಬ್ಬರು ‘ಬದುಕೆಂದರೆ ಹುಡುಗಾಟವಲ್ಲ; ಹುಡುಕಾಟ’ ಎಂದು ಬರೆದುಕೊಟ್ಟಿದ್ದರು. ಯಾವ ಗಳಿಗೆಯಲ್ಲಿ ಅದನ್ನು ಬರೆದುಕೊಟ್ಟರೋ ಏನೋ? ಅದು ಈಗ ನನ್ನ ಬದುಕಿನಲ್ಲಿ ನೂರು ಪ್ರತಿಶತ ಈ ರೀತಿ ಸತ್ಯವಾಗುತ್ತದೆ ಎಂದು ಕನಸಿನಲ್ಲಿಯೂ ಅಂದುಕೊಂಡಿರಲಿಲ್ಲ. ರಿಕ್ಷಾಗಳ ಹಿಂದೆ, ಇನ್‌ಸ್ಟಾಗ್ರಾಂ, ವ್ಯಾಟ್ಸ್‌ಆಪ್ ಸ್ಟೇಟಸ್ಸುಗಳಲ್ಲಿ ಮಿಂಚುವ ವಾಕ್ಯಗಳಂಥವು ಅದರಲ್ಲಿ ದಂಡಿಯಾಗಿದ್ದವು. ಆದರೆ ಆ ಪುಸ್ತಕವನ್ನು ಮಾತ್ರ ಎಲ್ಲಿಟ್ಟಿದ್ದೇನೆ ಎಂಬುದು ನೆನಪಾಗುತ್ತಲೇ ಇಲ್ಲ.

ಇನ್ನೂ ಹುಡುಕುತ್ತಲೇ ಇದ್ದೇನೆ!

ಪ್ರತಿಕ್ರಿಯಿಸಿ: **feedback@sudha.co.in**